ಅಧ್ಯಕ್ಷರು.—ಕಾಗದ ಪತ್ರಗಳನ್ನು ಪರಿಶೀಲನೆ ಮಾಡಿಯೇ ಇಲ್ಲಿ ಉತ್ತರ ಕೊಡಬೇಕಾಗಿರುತ್ತದೆ. ಪರಿಶೀಲನೆ ಮಾಡದೇ ಹೇಗೆ ಉತ್ತರ ಕೊಡುವುದಕ್ಕಾಗುತ್ತದೆ?

ಶ್ರೀ ಶೀರ್ನಾಳಿ ಚಂದ್ರಶೇಖರ್.—ಅಧ್ಯಕ್ಷರೇ ಮಾನ್ಯ ಶ್ರೀ ಸದ್ಯೋಜಾತಪ್ಪನವರ ಹತ್ತಿರ ವ್ಯವಹಾರ ಮಾಡುವುದು ಬಹಳ ಕಷ್ಟ. ಸ್ವಾಮಿ. ನಾನು ಹೇಳುತ್ತಿರುವುದು ಏನೆಂದರೆ ಅಲ್ಲಿ ನೀರಿನ ತೆರಿಗೆ ಸಾಕಷ್ಟು ವಸೂಲಿಯಾಗಬೇಕಾಗಿದೆ. ಆದಕ್ಕೆ ನಾನು ಅಲ್ಲಿಯ ಜನರಿಗೆ ಅದನ್ನೆಲ್ಲಾ ವಾಪಸ್ಸು ಕೊಡುವ ಬಗ್ಗೆ ತಿಳಿಸಿದ್ದೇನೆ ಮತ್ತು ಬೇಕಾದರೆ ೫ ರೂಪಾಯಿ ಬಾಂಡ್ ಪೇಪರ್ ಮೇಲ್ಕಳಿಕೆ ಬರೆದು ಕೊಡಿ ಎಂದು ಹೇಳಿರೂ ಅಲ್ಲಿಯ ಜನ ಸಿದ್ಧರಾಗಿದ್ದಾರೆ. ಮತ್ತೆ ಈ ಯೋಜನೆಗೆ ಎಷ್ಟೇ ಖರ್ಚು ತಗಲಿದರೂ ಅವರು ಕೊಡಲು ಸಿದ್ಧರಾಗಿದ್ದಾರೆ ಇದರ ಬಗ್ಗೆ ಅಲ್ಲಿಯ ಜನ ಮತ್ತು ನಾನು ಸಹ ಎಗ್ಜಿಕ್ಯುಟಿವ್ ಇಂಜಿನಿಯರ್ ರವರಿಗೆ ಮತ್ತು ಅಸಿಸ್ಟೆಂಟ್ ಇಂಜಿನಿಯರ್‌ರವರಿಗೆ ಬರೆದು ತಿಳಿಸಿದ್ದೇವೆ.

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಬರೆದು ಕೊಟ್ಟರೂ ಸಹ ಅಲ್ಲಿಗೆ ನೀರು ಕೊಡುವುದಕ್ಕೆ ಆಗುವುದಿಲ್ಲವಲ್ಲಾ. ನೀರೇ ಇಲ್ಲವಲ್ಲಾ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಸ್ವಾಮಿ. ಇನ್ನೊಂದು ಮೂಲಭೂತವಾದಂಥ ಪ್ರಶ್ನೆ. ಈ ಶಾಸನ ಸಭೆಯಲ್ಲಿ ನಾನು ಕಳೆದ ಬಾರಿ ಕೂಡ ಇದೇ ವಿಷಯವನ್ನು ಪ್ರಸ್ತಾಪ ಮಾಡಿದ್ದೆ, ಆಗಲೂ ಸಹ ಈ ಯೋಜನೆಯ ಬಗ್ಗೆ ಸರ್ವೆ ಮಾಡಿಸುತ್ತೇವೆ, ಎಸ್ಟಿಮೇಟ್ ಮಾಡಿಸುತ್ತೇವೆ ಎನ್ನುತಕ್ಕ ಉತ್ತರವನ್ನು ಹಿಂದಿನ ಮಂತ್ರಿಗಳವರು ಉತ್ತರ ಕೊಟ್ಟಿದ್ದರು ಈಗ ಆಗುವುದಿಲ್ಲವೆಂದರೆ ಹೇಗೆ ಸ್ವಾಮಿ. ಬೇಕಾದರೆ ಹಿಂದಿನ ವರ್ಷದ ನಡವಳಿಕೆಗಳನ್ನು ತೆಗೆದು ನೋಡಿ.

ಅಧ್ಯಕ್ಷರು.—(ಸಿ)ಗೆ ಉತ್ತರದಲ್ಲಿ ನೋಡಿ, ಕಾಮುದವತಿ ನದಿಯಲ್ಲಿ ನೀರಿನ ಮೂಲವಿಲ್ಲದಿರುವುದರಿಂದ ಈ ಕಾಮಗಾರಿಯನ್ನು ಕೈಗೊಳ್ಳುವ ಸಾಧ್ಯತೆ ಇಲ್ಲವೆಂದು ಹೇಳಿದ್ದಾರೆ. ನೀರೇ ಇಲ್ಲವೆಂದು ಹೇಳುತ್ತಿದ್ದಾರಲ್ಲಾ.

ಶ್ರೀ ಶೀರ್ನಾಳಿ ಚಂದ್ರಶೇಖರ್.—ಇಪತ್ತು ನೀರು ಇಲ್ಲವೆಂದು ಹೇಳುತ್ತಿದ್ದಾರೆ. ಆದರೆ ಕಳೆದಸಾರಿ ಒಪ್ಪಿಕೊಂಡಿದ್ದರು, ನೀರು ಇದೆ ಎಂದು ಬೆಳೆಗೆ ನೀರನ್ನು ಕೊಡಲು ಪರಿಶೀಲನೆ ಮಾಡುತ್ತೇವೆ, ಸರ್ವೆ ಮಾಡಿಸುತ್ತೇವೆ, ಎಸ್ಟಿಮೇಟ್ ಮಾಡಿಸುತ್ತೇವೆಂದು ಹೇಳಿದ್ದರು. ಈಗ ನೋಡಿದರೆ ಆ ಉತ್ತರಕ್ಕೆ ತದ್ವಿರುದ್ಧವಾಗಿ ಉತ್ತರ ಕೊಡುತ್ತಿದ್ದಾರೆ. ಇದಕ್ಕೆ ಕಾರಣವೇನು ಸ್ವಾಮಿ?

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ನಮ್ಮ ಚೀಫ್ ಇಂಜಿನಿಯರ್‌ರವರನ್ನು ನನ್ನ ಛೇಂಬರ್ಸ್‌ಗೆ ಕರೆಸುತ್ತೇನೆ ನೀವು ಬನ್ನಿ ಕೂತು ನಾವು ವಿಚಾರ ವಿನಿಮಯ ಮಾಡಿ ಆನಂತರ ಮುಂದಿನ ಕ್ರಮ ತೆಗೆದು ಕೊಳ್ಳುವುದಕ್ಕೆ ಏರ್ಪಾಡು ಮಾಡೋಣ.

ಶ್ರೀ ಶೀರ್ನಾಳಿ ಚಂದ್ರಶೇಖರ್—ವಿಚಾರ ವಿನಿಮಯ ಮಾಡುವ ಪ್ರಶ್ನೆ ಬೇರೆ ಈಗ ನೀರು ಕೊಡುವುದಕ್ಕೆ ತಾವು ವ್ಯವಸ್ಥೆ ಮಾಡುತ್ತೀರೋ ಇಲ್ಲವೋ ಎಂಬುದನ್ನು ಹೇಳಿ ಎಂದು ಕೇಳುತ್ತಿದ್ದೇನೆ.

ಅಧ್ಯಕ್ಷರು.—ಇದ್ದರೆ ಕೊಡುತ್ತಾರೆ ಇಲ್ಲದೇ ಹೋದರೆ ಅವರೇನು ಮಾಡುತ್ತಾರೆ?

ಶ್ರೀ ಶೀರ್ನಾಳಿ ಚಂದ್ರಶೇಖರ್.—ಅಲ್ಲ ಸ್ವಾಮಿ, ಅವರು ನೀರನ್ನು ಅಲ್ಲಿಗೆ ಒದಗಿಸುವುದಕ್ಕೆ ಆಗುತ್ತದೆ ಇಲ್ಲವೆ ಏನ್ನುವ ಬಗ್ಗೆ ಸ್ಪಷ್ಟವಾಗಿ ಹೇಳಲಿ ಎಂದು ಕೇಳುತ್ತಿದ್ದೇನೆ.

SRI M.M.J. SADYOJATHA.—I will re-examine the matter.

SRI S.M. SHEERNALY CHANDRASEKHAR.—Thank you very much.

Scarcity Conditions in Hassan District

773 SRI K.H. HANUME GOWDA (Hassan).—Will the Minister of State for Major and Medium Irrigation be pleased to state.—

(a) whether it has come to the notice of Government that the Hassan, Arasikere and Belur Taluks of Hassan District are affected very year often by drought,

(b) is it not a fact that Government is spending lakhs of rupees every year to relieve there people from drought.

(c) whether Government intends to start "Yagachi" Scheme to provide permanent relief to these people from the drought;

(d) whether the plan and the estimates have been prepared;

(e) the stage at which the Scheme is pending?

SRI B.B.CHIMMANAKATTI(Minister of State for Majour and Medium Irrigation).—

(a) Yes.

(b) Yes.

(c) The "Yagachi" Scheme is prepared to provide irrigation facilities to the backward taluks of Hassan and Belur of Hassan District.

(d) Yes.

(e) The project report has been sent to the Central Water Commission for its technical sanction. Technical sanction has not been accorded so far.

ಶ್ರೀ ಕೆ.ಎಚ್. ಹನುಮೇಗೌಡ.—ಸ್ವಾಮಿ ಈ ಯೋಜನೆಗೆ ಎಸ್ಟಿಮೇಟ್, ಪ್ಲಾನ್ ತಯಾರು ಆಗಿದೆಯೇ? ಮತ್ತು ಎಷ್ಟು ಎಕರೆಗೆ ನೀರನ್ನು ಒದಗಿಸಬಹುದೆಂಬುದನ್ನು ತಿಳಿಸುತ್ತೀರಾ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಮಾನ್ಯ ಅಧ್ಯಕ್ಷರೇ, ೧೯೭೬-೭೭ನೇ ಇಸ್ವಿಯಲ್ಲಿ ಇದನ್ನು ಸರ್ವೆ ಮಾಡಿ, ಎಸ್ಟಿಮೇಟನ್ನು ಮಾಡಿದ್ದಾರೆ. ಇದರ ವೆಚ್ಚ ಸುಮಾರು ೧೬ ಕೋಟಿ ೪೫ ಲಕ್ಷ ಮತ್ತೆ ಮೇಲಾಗಿ ಈ ಯೋಜನೆಯಿಂದ ಬೇಲೂರು ಮತ್ತು ಹಾಸನ ತಾಲೂಕ್‌ಗಳಿಗೆ ಉಪಯೋಗವಾಗುತ್ತದೆ. ಹಾಸನ ತಾಲ್ಲೂಕಿನಲ್ಲಿ ಸುಮಾರು ೩೦ ಸಾವಿರ ಎಕರೆ, ಬೇಲೂರು ತಾಲ್ಲೂಕಿನಲ್ಲಿ ೫ ಸಾವಿರ ಎಕರೆ ನೀರಾವರಿ ಪ್ರದೇಶ ಈ ಯೋಜನೆಯಿಂದ ಒಳಪಟ್ಟಿರುತ್ತದೆ.

ಶ್ರೀ ಕೆ.ಎಚ್. ಹನುಮೇಗೌಡ.—ಈ ಯೋಜನೆಯ ವರದಿಯನ್ನು ಕೇಂದ್ರ ಜಲ ಆಯೋಗದ ತಾಂತ್ರಿಕ ಒಪ್ಪಿಗೆಗಾಗಿ ಕಳುಹಿಸಲಾಗಿದೆಯೆಂದು ಹೇಳಿದ್ದೀರಿ, ಕಳುಹಿಸಿದ ಮೇಲೆ ಅಲ್ಲಿಂದ ಪುನಃ ಏನಾದರೂ ಹೆಚ್ಚಿನ ಮಾಹಿತಿ ಬೇಕೆಂದು ಏನಾದರೂ ಕೇಳಿದ್ದಾರೆಯೇ? ಇಷ್ಟು ನಿಧಾನವಾಗಲು ಕಾರಣವೇನು ಸ್ವಾಮಿ ?

ಶ್ರೀ ಬಿ.ಬಿ. ಚಿಮ್ಮನಕಟ್ಟಿ,—ಮಾನ್ಯ ಅಧ್ಯಕ್ಷರೇ, ಈ ಯೋಜನೆಯನ್ನು ಸಿದ್ಧ ಪಡಿಸಿದ ನಂತರ ಸೆಂಟ್ರಲ್ ವಾಟರ್ ಕಮಿಷನ್ನಿನವರಿಗೆ ೪-೭-೧೯೭೭ರಲ್ಲಿ ಕಳುಹಿಸಿ ಕೊಟ್ಟಿದ್ದೆವು ಆನಂತರ ೨೩-೧-೭೯ಕ್ಕೆ ರಿಪ್ಲೈ ಕೊಟ್ಟಿದ್ದಾರೆ. ಆದರಲ್ಲಿ ಅವರು ಸ್ಪಷ್ಟವಾಗಿ ತಿಳಿಸಿರತಕ್ಕಂಥದ್ದು ಏನೆಂದರೆ ನೀರಿನ ಬಗ್ಗೆ ಇಂಟರ್‌ಸ್ಟೇಟ್ ಡಿಸ್ಪ್ಯೂಟ್ ಇರುವುದರಿಂದ ಇದನ್ನು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಆದು ಸಾಲ್ವ್ ಆದ ನಂತರ ಈ ಯೋಜನೆಯನ್ನು ತೆಗೆದುಕೊಳ್ಳಬಹುದೆಂದು ಬರೆದಿರುವುದರಿಂದ ಸಧ್ಯಕ್ಕೆ ಈ ಯೋಜನೆಯನ್ನು ಪರಿಶೀಲನೆ ಮಾಡಿ ಇಟ್ಟಿರುತ್ತೇವೆ.

ಶ್ರೀ ಗಂಗಾಧರಪ್ಪ.—ಸ್ವಾಮಿ, ಈ ಯೋಜನೆಯಿಂದ ನಮ್ಮ ಆರಸೀಕರೆ ತಾಲ್ಲೂಕಿಗೂ ಅನುಕೂಲವಾಗುತ್ತದೆ, ಆದರೆ ಯಾವ ಕಾರಣದಿಂದ ನಮ್ಮ ತಾಲೂಕನ್ನು ಕೈ ಬಿಡಲಾಗಿದೆಂಬುದನ್ನು ತಿಳಿಸುತ್ತೀರಾ?

ಶ್ರೀ ಬಿ.ಬಿ. ಚಿಮ್ಮನ ಕಟ್ಟಿ.—ಈ ಯೋಜನೆಯಲ್ಲಿ ಯಾವ ಯಾವ ತಾಲ್ಲೂಕಗಳು ಬರುತ್ತವೆ ಎಷುವ ಬಗ್ಗೆ ಸಂಬಂಧಪಟ್ಟ ಇಂಜಿನಿಯರ್‌ಗಳು ಸರ್ವೆ ಮಾಡಿರುತ್ತಾರೆ ಅದರ ಪ್ರಕಾರ ಹಾಸನ ಮತ್ತು ಬೇಲೂರು ತಾಲ್ಲೂಕುಗಳನ್ನು ಮಾತ್ರ ತೆಗೆದುಕೊಂಡಿದ್ದಾರೆ.

ಶ್ರೀ ಕೆ.ಎಚ್. ಹನುಮೇಗೌಡ.—ಸ್ವಾಮಿ, ಇಂಟರ್‌ಸ್ಟೇಟ್ ಡಿಸ್ಪ್ಯೂಟ್ ಇರುವುದರಿಂದ ನಿಧಾನ ವಾಗಿದೆ ಎಂದು ಮಾನ್ಯ ಸಚಿವರು ತಿಳಿಸಿದರು. ಆದರೆ ಕಾವೇರಿ ವೇಸಿನ್ ಬಗ್ಗೆ ಕೂಡ ಬಹಳ ವರ್ಷ ಗಳಿಂದ ಡಿಸ್ಪ್ಯೂಟ್ ಇದ್ದರೂ ಕೂಡ ಹೇಮಾವತಿ, ಕಬಿನಿ, ಹಾರಂಗಿ ಯೋಜನೆಗಳನ್ನು ತಾವು ಕೈಗೊಂಡಿಲ್ಲವೇ ಹಾಗೆನೇ ನಮ್ಮ ಮಾನ್ಯ ಮಂತ್ರಿಗಳವರು ದೊಡ್ಡ ಮನಸ್ಸು ಮಾಡಿ ನಮ್ಮ ಜಿಲ್ಲೆಯ ಜನಗಳ ಕಷ್ಟಸುಖಗಳನ್ನು ಅರಿತವರಾದುದರಿಂದ ಅವರ ಸಹಾಯಕ್ಕೆ ಬರಬೇಕೆಂದು ಕೇಳಿಕೊಳ್ಳುತ್ತಿದ್ದೇನೆ ಮತ್ತೆ ನನ್ನ ೨೦, ೨೫ ವರ್ಷಗಳ ಅನುಭವದಲ್ಲಿ ಹೇಳುವುದಾದರೆ, ೨-೩ ವರ್ಷಗಳಿಗೊಮ್ಮೆ ಬರ ಬೇರೆ ಬರುತ್ತಿದೆ. ಪಶ್ಚಿಮ ಘಟ್ಟಗಳಲ್ಲಿರತಕ್ಕ ಜನರು ಈ ಬರಗಾಲದ ಕಷ್ಟವನ್ನು ಪರಿಹರಿಸಿಕೊಳ್ಳಲು ಬೇರೆ ಕಡೆಗೆ ಕೆಲಸ ಹುಡುಕಿಕೊಂಡು ಹೋಗುತ್ತಿದ್ದಾರೆ. ಆದುದರಿಂದ ಈ ಬಡಪಾಯಿ ಜನರ ಕಷ್ಟವನ್ನು ನಿವಾರಣೆ ಮಾಡಲು ಮಾನ್ಯ ಮುಖ್ಯಮಂತ್ರಿಗಳವರು ಸಹಾಯಕ್ಕೆ ಬರಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಬೇರೆ ಬೇರೆ ಯೋಜನೆಗಳನ್ನು ಕೈಗೊಂಡಿರುವಾಗ ಇದನ್ನು ಸಹ ಕೈಗೊಳ್ಳಲು ಮಾನ್ಯ ಮುಖ್ಯಮಂತ್ರಿ ಗಳವರು ದೊಡ್ಡ ಮನಸ್ಸು ಮಾಡಬೇಕೆಂದು ಕೇಳಿಕೊಂಡು ಅವರು ದೊಡ್ಡ ಮನಸ್ಸು ಮಾಡುತ್ತಾರೆ ಎನ್ನುವ ಆಶಾಭಾವನೆಯಿಂದ ನಮ್ಮ ಜನತೆಯ ಪರವಾಗಿ ಈಗಲೇ ಧನ್ಯವಾದಗಳನ್ನು ಅರ್ಪಿಸಬಯಸುತ್ತೇನೆ ಸ್ವಾಮಿ, ನಾನು ಅವರಿಂದ ಇದಕ್ಕೆ ಸೂಕ್ತವಾದ ಉತ್ತರವನ್ನು ನಿರೀಕ್ಷಣೆ ಮಾಡುತ್ತೇನೆ ಅಧ್ಯಕ್ಷರೇ.

ಶ್ರೀ ಆರ್. ಗುಂಡೂರಾವ್.— ರಿಪೋರ್ಟ್ ಕಳುಹಿಸಿ ಕೊಟ್ಟಿದ್ದಾರೆ. ಮತ್ತೆ ಸೆಂಟ್ರಲ್ ಗೌವರ್ನ್‌ಮೆಂಟಿನವರಿಂದ ಏನು ಉತ್ತರ ಬರುತ್ತದೆಯೋ ನೋಡೋಣ. ಪುನ: ಬೇಕಾದರೆ ಇನ್ನೊಂದು ಸಾರಿ ಟೆಕ್ನಿಕಲ್ ಎಕ್ಸ್‌ಪರ್ಟ್‌ರವರಿಂದ ಎಗ್ಸಾಮಿನ್ ಮಾಡಿಸೋಣ. We are not averse to taking up any project.

ಶ್ರೀ ಕೆ.ಎಚ್. ಹನುಮೇಗೌಡ.—ಸ್ವಾಮಿ, ನನ್ನ ಪ್ರಶ್ನೆ ಇಷ್ಟೇ. ಅಲ್ಲಿಯ ಜನರು ಕೂಡ ಅತ್ಯಂತ ವಿನಯದಿಂದ ನಡೆದುಕೊಂಡಿದ್ದಾರೆ. ಆದುದರಿಂದ ತಾವು ಆದಷ್ಟು ಜಾಗ್ರತೆ ಶುರು ಮಾಡುತ್ತೇವೆಂದು ಆಷ್ಟು ಮಾತ್ರ ಹೇಳಿ ಬಿಡಿ ಸಾಕು, ತಾವು ಯಾವತ್ತಾದರೂ ಮಾಡಿಯೇ ಮಾಡುತ್ತೀರಾ ಆಷ್ಟು ನಂಬಿಕೆ ತಮ್ಮ ಮೇಲೆ ನಮಗೆಲ್ಲಾ ಇದೆ.

ಶ್ರೀ ಆರ್. ಗುಂಡೂರಾವ್.—ವಿಚಾರ ಮಾಡುತ್ತೇವೆಂದು ಹೇಳಿದ್ದೇನೆ, ನೋಡೋಣ.

ಶ್ರೀ ಗಂಗಾಧರಪ್ಪ.—ಇದನ್ನು ಪುನರ್ ಪರಿಶೀಲನೆ ಮಾಡುವ ಸಮಯದಲ್ಲಿ ಅರಸೀಕೆರೆ ತಾಲ್ಲೂಕನ್ನು ಸೇರಿಸಿಕೊಂಡು ಅಲ್ಲಿಗೂ ಸಹ ನೀರನ್ನು ಒದಗಿಸಿ ಕೊಡುವ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳವರು ಆಶ್ವಾಸನೆ ಕೊಡುತ್ತಾರೆಂದು ನಂಬಿ ನಮ್ಮ ಅರಸೀಕೆರೆ ಜನತೆಯ ಪರವಾಗಿ ಅವರಿಗೆ ವಂದಿಸುತ್ತೇನೆ ಸ್ವಾಮಿ.

ಶ್ರೀ ಆರ್. ಗುಂಡೂರಾವ್—ಅದನ್ನೂ ವಿಚಾರ ಮಾಡೋಣ.

MR. SPEAKER —Question hour is over.

QUESTIONS FOR ANSWERS ON THE DAY
(but not taken up)

Adulterating Palmoliene Oil and selling at higher rates in fair price shops and Co-operative societies etc.

249 SRI C.M. ARUMUGHAM (K.G.F.).—Will the Minister for Food and Civil Supplies be pleased to state.-

(a) whether it has come to the notice of the Government that certain Fair Price Depots and Co-operative Societies in Bangarpet Taluk are adulterating Palmoliene Oil and selling at higher rates.